ಡಾ|| ಹೆಚ್. ಸಿ. ಮಹಾದೇವಪ್ಪ : ಮಾನ್ಯ ಸಭಾಧ್ಯಕ್ಷರೆ, ಹಿಂದೆ ಎಸ್.ಎಸ್.ಎಲ್.ಸಿ ಪಾಸ್ ಆದಮೇಲೆ ಹತ್ತು ತಿಂಗಳ ಫಾರ್ಮಾಸಿಸ್ಟ್ ತರಬೇತಿಯನ್ನು ಕೊಟ್ಟು ಉದ್ಯೋಗ ಕೊಡತಕ್ಕಂಥ ಕೆಲಸ ಇಂಡಿಯನ್ ಸಿಸ್ಟಮ್ ಆಫ್ ಮೆಡಿಸಿನ್‌ನಲ್ಲಿ ನಡೆಯುತ್ತಿತ್ತು. ಅದು ಆದಮೇಲೆ ಇಂಡಿಯನ್ ಇನ್ಸ್‌ಟಿಟ್ಯೂಟ್ ಆಫ್ ಕೌನ್ಸಿಲ್‌ನಲ್ಲಿ 10+2 ಅಂದರೆ ಪಿ.ಯು.ಸಿ. ಓದಿದವರಿಗೆ ಈ ತರಬೇತಿ ಕೊಡಬೇಕು ಎಂದು ಬಂದಾಗ ಅಲ್ಲಿ ಕೆಲಸ ಮಾಡತಕ್ಕಂಥ ನೌಕರರು ವೇತನದ ತಾರತಮ್ಯ ಆಗುತ್ತದೆ. ಆದ್ದರಿಂದ ಇದನ್ನು ಪುನರ್ ಪರಿಶೀಲನೆ ಮಾಡಬೇಕು ಎಂದು ಹೇಳಿದಮೇಲೆ ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ. ಪಠ್ಯಪುಸ್ತಕ ಪರಿಷ್ಕರಣ ಮಾಡತಕ್ಕಂಥವರು ಸೆಂಟ್ರಲ್ ಕೌನ್ಸಿಲ್ ಆಫ್ ಇಂಡಿಯಾದವರು ಆಯುರ್ವೇದಿಕ್ ಕೌನ್ಸಿಲ್‌ನವರು ಇದು ರಾಜ್ಯ ಸರ್ಕಾರದ ವ್ಯಾಪ್ತಿಯಲ್ಲಿ ಬರುವುದಿಲ್ಲ. ಅವರು ಯಾವಾಗ ಮಾಡುತ್ತಾರೆ ನಮಗೆ ಗೊತ್ತಿಲ್ಲ. ಆದರೂ ಕೂಡ ನಮ್ಮ ರಾಜ್ಯ ಸರ್ಕಾರ ಈ ರೀತಿ ತೊಂದರೆಯಾಗದ ರೀತಿಯಲ್ಲಿ ಪಕ್ಕದ ರಾಜ್ಯಗಳಲ್ಲಿ ಆಂಧ್ರ ಮತ್ತು ಇತರ ರಾಜ್ಯಗಳಲ್ಲಿ ಈ ಒಂದು ತರಬೇತಿ ನಡೆಯುತ್ತಿದೆ ಅದನ್ನು ನೋಡಿ ಪರಿಶೀಲನೆ ಮಾಡುತ್ತಿದ್ದೇವೆ. ಇನ್ನು ಮೂರು ನಾಲ್ಕು ತಿಂಗಳಲ್ಲಿ ಅವರಿಗೆ ತರಬೇತಿ ಕೊಡತಕ್ಕಂಥ ಕೆಲಸವನ್ನು ಪ್ರಾರಂಭ ಮಾಡುತ್ತೇವೆ. ಪಠ್ಯಪುಸ್ತಕ ಯಾವಾಗಲಾದರೂ ಬರಲಿ. ಆದರೆ ತರಬೇತಿ ಕೊಡಲಿಕ್ಕೆ ನಾವು ಪ್ರಯತ್ನ ಮಾಡುತ್ತಿದ್ದೇವೆ. ಮತ್ತು ರಾಜ್ಯ ಸರ್ಕಾರದ ವ್ಯಾಪ್ತಿನಲ್ಲಿ ಸಿಲೆಬಸ್ ಮಾಡಲಿಕ್ಕೆ ಹೇಳಿದ್ದೇವೆ ಅದನ್ನು ಇನ್ನು ಎರಡು ಮೂರು ತಿಂಗಳಲ್ಲಿ ಪ್ರಾರಂಭ ಮಾಡಲಿಕ್ಕೆ ನಾನು ಕ್ರಮ ಕೈಗೊಳ್ಳುತ್ತೇನೆ.

ಬಾದಾಮಿ ತಾಲ್ಲೂಕಿನಲ್ಲಿ ಪ್ರೌಢಶಾಲೆಗಳಲ್ಲಿ ಶಿಕ್ಷಕರ ಮತ್ತು ಕಟ್ಟಡದ ಕೊರತೆ

553 - ಶ್ರೀ ಬಿ. ಬಿ. ಚಿಮ್ಮನಕಟ್ಟಿ (ಬಾದಾಮಿ) : ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಾದಾಮಿ ತಾಲ್ಲೂಕಿನಲ್ಲಿರುವ ಒಟ್ಟು ಸರ್ಕಾರಿ ಪ್ರೌಢಶಾಲೆಗಳೆಷ್ಟು?

ಆ) ಯಾವ ಪ್ರೌಢಶಾಲೆಗಳಲ್ಲಿ ಕಟ್ಟಡ ಹಾಗೂ ಶಿಕ್ಷಕರ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆ?

ಇ) ಹಾಗಿದ್ದಲ್ಲಿ ಈ ವರ್ಷ ಶೀಘ್ರದಲ್ಲಿಯೇ ಹುದ್ದೆಗಳ ಮಂಜೂರಾತಿ ಹಾಗೂ ಶಿಕ್ಷಕರನ್ನು ನಿಯೋಜಿಸಲು ಸರ್ಕಾರವು ಕ್ರಮ ಕೈಗೊಳ್ಳಲಾಗುತ್ತದೆಯೇ?

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರಾಢ ಶಿಕ್ಷಣ ಸಚಿವರು)

ಅ) 07.

ಆ) ಬಾದಾಮಿ ತಾ: ಗುಳೇದಗುಡ್ಡದಲ್ಲಿರುವ ಸರ್ಕಾರಿ ಜೂನಿಯರ್ ಕಾಲೇಜು ಬಾಲಕರ ಮತ್ತು ಬಾಲಕಿಯರ ಇವುಗಳಲ್ಲಿ ಕೊಠಡಿಗಳ ಕೊರತೆ ಇರುವುದು ಗಮನಕ್ಕೆ ಬಂದಿದೆ ಸದರಿ ಸರ್ಕಾರಿ ಪ್ರೌಢಶಾಲೆಗಳಲ್ಲಿ ಶಿಕ್ಷಕರ ಕೊರತೆ ಇರುವುದಿಲ್ಲ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಬಿ. ಬಿ. ಚಿಮನಕಟ್ಟಿ : ಮಾನ್ಯ ಅಧ್ಯಕ್ಷರೆ, . ಉತ್ತರ ಸರಿಯಾಗಿಲ್ಲ. ಬಾದಾಮಿ ತಾಲ್ಲೂಕಿನಲ್ಲಿರುವ ಒಟ್ಟು ಸರ್ಕಾರಿ ಪ್ರೌಢಶಾಲೆಗಳೆಷ್ಟು ಎಂದು ಕೇಳಿದ್ದಕ್ಕೆ ಏಳು ಎಂದು ಹೇಳಿದ್ದಾರೆ. ಇದರಲ್ಲಿ ಸುಮಾರು ಎರಡು ಹೈಸ್ಕೂಲ್‌ಗಳಿಗೆ ಕಟ್ಟಡ ಇಲ್ಲ ಮತ್ತು ಸಿಬ್ಬಂದಿ ಇಲ್ಲ. ಅದರ ಬಗ್ಗೆ ಏನೂ ಪ್ರಸ್ತಾಪ ಇಲ್ಲ. ನಾನು ನೇರವಾಗಿ ಕೇಳುವ ಪ್ರಶ್ನೆ ಇಷ್ಟೇ ಅನವಾಲ ಮತ್ತು ಗೋವಿನಕೊಪ್ಪ ಈ ಎರಡು ಹೈಸ್ಕೂಲ್‌ಗಳಿಗೆ ಎಷ್ಟು ಸಿಬ್ಬಂದಿ ನೀಡಲಾಗಿದೆ, ಈಗಾಗಲೇ ಎಷ್ಟು ಸಿಬ್ಬಂದಿಯನ್ನು ಪೋಸ್ಟ್ ಮಾಡಿದ್ದೀರಿ ಎನ್ನುವುದು ಒಂದು. ಆಮೇಲೆ ಆ ಎರಡು ಹೈಸ್ಕೂಲ್‌ಗಳಿಗೆ ಕಟ್ಟಡ ಇಲ್ಲ, ಅದಕ್ಕೋಸ್ಕರ 1976-77ರಲ್ಲಿ ಎಷ್ಟು ನಿಗದಿ ಮಾಡಿದಿರಿ? ಎಷ್ಟು ಹಣ ಬಿಡುಗಡೆ ಮಾಡಿದಿರಿ?

ಶ್ರೀ ಹೆಚ್. ಜಿ. ಗೋವಿಂದೇಗೌಡ : ಮಾನ್ಯ ಸಭಾಧ್ಯಕ್ಷರೇ, ಉಪಾಧ್ಯಾಯರುಗಳ ಅವಶ್ಯಕತೆ ಇರುವಷ್ಟು ಅಲ್ಲಿ ಇಲ್ಲದಿದ್ದರೂ ಅಲ್ಲಿ ಎಷ್ಟು ಸ್ಯಾಂಕ್ಷನ್ಡ್ ಪೋಸ್ಟ್ ಇದೆ ಅಷ್ಟನ್ನು ಭರ್ತಿ ಮಾಡತಕ್ಕಂಥ ವ್ಯವಸ್ಥೆ ಮಾಡಿದ್ದೇವೆ. ಪ್ರೌಢಶಾಲಾ ಕಟ್ಟಡಗಳನ್ನು ಕಟ್ಟ ಬೇಕಾದರೆ ನಾವು ಜಿಲ್ಲಾಪಂಚಾಯತ್‌ಗೆ ಹಣವನ್ನು ಕೊಡುತ್ತೇವೆ. ಆಮೇಲೆ ಒಂದೊಂದು ಕ್ಷೇತ್ರಕ್ಕೆ ಒಂದು ಹೈಸ್ಕೂಲ್ ಕಟ್ಟಡ ಇರಬೇಕೆಂದು ಮಾಡಿರುವುದರಿಂದ 224 ಮತಕ್ಷೇತ್ರಗಳಿಗೆ ಸಂಬಂಧಿಸಿದ ಜಿಲ್ಲಾಪಂಚಾಯತ್‌ಗಳಿಗೆ ನಾವು ಈಗಾಗಲೇ ಹಣವನ್ನು ಒದಗಿಸಿದ್ದೇವೆ. ತಾವು ಅದನ್ನು ಸಹ ಉಪಯೋಗಿಸಿಕೊಳ್ಳಬಹುದು. ಅವರ ವತಿಯಿಂದ ಬರತಕ್ಕಂಥ ಹಣವನ್ನು ಸಹ ಈ ಪದವಿಪೂರ್ವ ಕಾಲೇಜುಗಳಲ್ಲಿ ಹೈಸ್ಕೂಲು ಕೂಡ ಇರುವುದರಿಂದ ಅವರು ಸಹ ಇದಕ್ಕೆ ಹಣವನ್ನು ಕೊಟ್ಟರೆ ಹೆಚ್ಚಿನ ಒಂದು ಸಮಸ್ಯೆ ಉದ್ಭವಿಸುವುದಿಲ್ಲ ಎಂದು ನನಗೆ ಕಾಣುತ್ತದೆ, ಮಾನ್ಯ ಚಿಮನ ಕಟ್ಟಿಯವರು ಜಿಲ್ಲಾಪಂಚಾಯತ್ ಅಧ್ಯಕ್ಷರನ್ನು ಸಂಪರ್ಕ ಇಟ್ಟುಕೊಂಡು ಅವಶ್ಯಕತೆ ಇರುವುದರಿಂದ ಅಲ್ಲಿಯೂ ಕೂಡ ಅವರು ಪ್ರಯತ್ನಪಡಲಿ ಮತ್ತು ನಾವು ಕೂಡ ಒಂದೊಂದು ಕ್ಷೇತ್ರಕ್ಕೆ ಒಂದೊಂದು ಹೈಸ್ಕೂಲ್‌ಗಾಗಿ ಏನು ಒಂಭತ್ತು ಲಕ್ಷ ರೂಪಾಯಿಗಳನ್ನು ಕೊಡುವ ತೀರ್ಮಾನ ಮಾಡಿದ್ದೇವೆ, ಅದನ್ನು ಎರಡು ವರ್ಷದಲ್ಲಿ ಮುಗಿಸುತ್ತೇವೆ. ಈಗ ಖಾಲಿ ಉಪಾಧ್ಯಾಯರುಗಳು ಏನು ಇದ್ದಾರೆ ಅವರನ್ನು ನಾವು ಕಳುಹಿಸಿದ್ದೇವೆ. ಅವಶ್ಯಕತೆ ಇದ್ದರೆ ಇನ್ನು ಎರಡು ಮೂರು ತಿಂಗಳೊಳಗಾಗಿ 3,500 ಉಪಾಧ್ಯಾಯರುಗಳನ್ನು ನೇಮಕ ಮಾಡಿಕೊಳ್ಳತಕ್ಕಂಥದ್ದು ನಡೆಯುತ್ತಿದೆ ಅದು ಆದ ತಕ್ಷಣ ಎಲ್ಲ ಹೈಸ್ಕೂಲ್‌ಗಳಿಗೆ ಕಳುಹಿಸುತ್ತೇವೆ.

ಶ್ರೀ ಬಿ. ಬಿ. ಚಿಮನಕಟ್ಟಿ : ಜನರಲ್ ಉತ್ತರ ಹೇಳುವುದರಿಂದ ಸಮಾಧಾನವಾಗುವುದಿಲ್ಲ. ನಾನು ನೇರವಾಗಿ ಎರಡು ಹೈಸ್ಕೂಲ್‌ಗಳ ಬಗ್ಗೆ ಕೇಳುತ್ತಿದ್ದೇನೆ. ಹೋಗಲಿ ಸರ್ಕಾರದಲ್ಲಿ ನೂರು ಹೈಸ್ಕೂಲ್‌ಗಳಿಗೆ ಪ್ರಯೋಗ ಶಾಲೆ ಮಾಡಬೇಕು ಎಂದು ಏನು ಹೊರಟಿದ್ದೀರಿ ಅದರೊಳಗೆ ಈ ಅನವಾಲ ಮತ್ತು ಗೋವಿನಕೊಪ್ಪ ಹೈಸ್ಕೂಲಿಗೆ ತಾವು ಕೊಡುತ್ತೀರಾ? ಇನ್ನೊಂದು ಪೀಠೋಪಕರಣ ಪಾಠೋಪಕರಣ ಯೋಜನೆಯೊಳಗೆ ಸುಮಾರು ಮೂರು ಲಕ್ಷ ಕೊಡಬೇಕೆಂದು ಆಯೋಗದೊಳಗೆ ಏನು ನಿಗದಿ ಮಾಡಿದ್ದೀರಿ ಅದರೊಳಗೆ ಈ ಎರಡು ಪ್ರೌಢಶಾಲೆಗಳಿಗೆ ಸೇರಿಸಿ 1997-98ನೇ ಸಾಲಿಗೆ ಕಾರ್ಯಕ್ರಮ ಹಾಕಿಕೊಳ್ಳುತ್ತೀರಾ?

ಶ್ರೀ ಹೆಚ್.ಜಿ. ಗೋವಿಂದೇಗೌಡ : ಈಗ ನಾವು ಯಾವುದೇ ಸೌಲಭ್ಯಗಳನ್ನು ಕೊಡುವುದಾದರೆ ಅವಶ್ಯಕತೆ ಎಲ್ಲಿ ಇದೆ ಅಂತಹ ಹೈಸ್ಕೂಲ್‌ಗಳಿಗೆ ಕೊಡುತ್ತಿದ್ದೇವೆ ಅವಶ್ಯಕತೆ ಇಲ್ಲದೇ ಇರತಕ್ಕಂಥ ಹೈಸ್ಕೂಲ್‌ಗಳಿಗೆ ಕೊಡುತ್ತಿದ್ದೇವೆ. ಎಂದು ಮಾನ್ಯ ಸದಸ್ಯರು ನನ್ನ ಗಮನಕ್ಕೆ ತಂದರೆ ಅದನ್ನು ವಜಾ ಮಾಡುವುದಕ್ಕೆ ಸಿದ್ಧನಾಗಿದ್ದೇನೆ. ಅನೇಕ ಕಡೆ ಬೆಂಚುಗಳು ಇಲ್ಲ, ಬೋರ್ಡ್‌ಗಳು ಇಲ್ಲ ಅಂತಹ ಕಡೆ ಕೊಡಬೇಕು. ನಾನು ಇಡೀ ರಾಜ್ಯದ ಆಗುಹೋಗುಗಳ ಬಗ್ಗೆ ಚಿಂತನೆ ಮಾಡುತ್ತಿದ್ದೇನೆ. ತಾವು ಏನು ಹೇಳಿದ್ದೀರಿ ಅದನ್ನು ದಯವಿಟ್ಟು ಕೊಡಿ ನಾನು ನೋಡುತ್ತೇನೆ. ಅದನ್ನು ನೋಡಿಕೊಂಡು ಅದರ ಬಗ್ಗೆ ಏನು ಮಾಡಬೇಕು ಅದನ್ನು ಮಾಡುತ್ತೇನೆ.

ಅಧ್ಯಕ್ಷರು : ಮಾಡುತ್ತಾರೆ ಬಿಡಿ.

ಸಾಂಪ್ರದಾಯಿಕವಲ್ಲದ ಇಂಧನ ಪದ್ಧತಿಗೆ ಸಹಾಯಧನ

554 - ಶ್ರೀ ಎ. ರಾಮದಾಸ್ (ಕೃಷ್ಣರಾಜ) : ಮಾನ್ಯ ಪರಿಸರ, ಜೀವಶಾಸ್ತ್ರ, ವಿಜ್ಞಾನ ಮತ್ತು ತಂತ್ರಜ್ಞಾನ ಮತ್ತು ಸಂಪ್ರದಾಯಕವಲ್ಲದ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅಸಂಪ್ರದಾಯಕ ಇಂಧನ ವ್ಯವಸ್ಥೆಗಳು ಯಾವುವು?

ಆ) ಸರ್ಕಾರವು ಯಾವ ಯಾವ ಅಸಂಪ್ರದಾಯಿಕ ಇಂಧನ ವ್ಯವಸ್ಥೆಗೆ ಎಷ್ಟು (ಶೇಖಡವಾರು) ಸಬ್ಸಿಡಿ ನೀಡಲಾಗುತ್ತಿದೆ.

ಇ) ಕಳೆದ 3 ವರ್ಷಗಳಲ್ಲಿ ಈ ವ್ಯವಸ್ಥೆಗೆ ಒಟ್ಟು ಎಷ್ಟು ಸಬ್ಸಿಡಿ ನೀಡಲಾಗಿದೆ.

ಈ) ಈ ಅಸಂಪ್ರದಾಯಕ ವ್ಯವಸ್ಥೆಯಿಂದ ಶೇಕಡಾ ಎಷ್ಟು ಪರ್ಯಾಯ ಇಂಧನ ದೊರಕುತ್ತಿದೆ.

ಉ) ಈ ವ್ಯವಸ್ಥೆಯಿಂದ ಫಲಕಾರಿ ಫಲಿತಾಂಶ ದೊರೆತಿದೆಯೇ?

ಶಿವಣ್ಣನವರ್ ಬಸವರಾಜ ನೀಲಪ್ಪ (ಪರಿಸರ, ಜೀವಿಶಾಸ್ತ್ರ, ವಿಜ್ಞಾನ ಮತ್ತು ತಂತ್ರಜ್ಞಾನ ಮತ್ತು ಸಂಪ್ರದಾಯಕವಲ್ಲದ ಇಂಧನ ರಾಜ್ಯ ಸಚಿವರು) :

ಅ) ಸಕ್ಕರೆ ಕಾರ್ಖಾನೆಗಳಿಂದ ಮುಖ್ಯವಾದ ಅಸಂಪ್ರದಾಯಕ ಇಂಧನ ವ್ಯವಸ್ಥೆಗಳು ಯಾವುವೆಂದರೆ, ಕಿರು ಜಲವಿದ್ಯುತ್, ಗಾಳಿ ಶಕ್ತಿ, ಸೌರ ಶಕ್ತಿ, ಜೈವಿಕ ಶಕ್ತಿ (ಸಹ ಶಕ್ತಿ ಉತ್ಪಾದನೆ), ಸಮುದ್ರದ ಅಲೆಗಳ ಶಕ್ತಿ ಮತ್ತು ಭೂಮಿಯೊಳಗಿನ ಉಷ್ಣತೆಯ ಶಕ್ತಿ.

ಆ) ರಾಜ್ಯ ಸರ್ಕಾರವು ಕೋಜನರೇಶನ್ ಉತ್ಪಾದನೆಯನ್ನು ಹೊರತುಪಡಿಸಿ ಇತರ ಯಾವುದೇ ಅಸಂಪ್ರದಾಯಕ ಇಂಧನ ವ್ಯವಸ್ಥೆಗಳಿಂದ ವಿದ್ಯುತ್ ಉತ್ಪಾದಿಸುವ ಯೋಜನೆಗಳಿಗೆ ಅನುದಾನವನ್ನು ನೀಡುತ್ತಿಲ್ಲ. ಕೋಜನರೇಶನ್‌ನಿಂದ ವಿದ್ಯುತ್ ಉತ್ಪಾದಿಸುವ ಸಕ್ಕರೆ ಕಾರ್ಖಾನೆಗಳಿಗೆ ಕಾರ್ಖಾನೆಗಳು ಗ್ರಿಡ್‌ಗೆ ಸರಬರಾಜು ಮಾಡುವ ಪ್ರತಿಯೊಂದು ಮೆಗಾವ್ಯಾಟ್‌ಗೆ ರೂ. 25 ಲಕ್ಷಗಳನ್ನು